


## ಗಾಂಧಿನಗರ ಶೋಕಸಾಗರ

ಯಾವುದೇ ಮಾನವೀಯ ಸಂದೇಶಇಲ್ಲದ; ಹಿಂಸೆ, ಕೌರ್ಯ, ಕಾಮನೆಗಳನ್ನು ವೈಭವೀಕರಿಸುವ ಚಿತ್ರಗಳನ್ನು ಯಾರು ತಾನೆ ಪದೇ ಪದೇ ನೋಡಲು ಸಾಧ್ಯವಿದೆ? ಗಟ್ಟಿ ಚಿತ್ರ ಕಥೆ, ಬಿಗಿ ನಿರ್ದೇಶನ, ಇಂಪಾದ ಸಂಗೀತ 'ಮೈನಸ್' ಆದಾಗ ಚಿತ್ರರಂಗ ಹಳ್ಳಹಿಡಿದು ಹೋಗುತ್ತದೆ. ಸುಧಾ ಸಮೀಕ್ಷೆ (ರಘುನಾಥ್, ವಿಶಾಖ) ನಿಷ್ಠುರವಾಗಿದೆ.

-ಕುಬೇರಪ್ಪ. ಎಂ. ವಿಭೂತಿ, ಹರಿಹರ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಬಿ.ಎಸ್.ರಮೇಶ್, ಬೆಂಗಳೂರು/ ಪಿ. ಗೋವಿಂದರಾಜ್, ಶಿವಮೊಗ್ಗ/ ವಿ.ಅರ್ಜುನ, ಮಂಡ್ಯ/ ರಾಜೇಂದ್ರಕುಮಾರ್, ದೊಡ್ಡಬಳ್ಳಾಪುರ

## ಪುನೀತ್‌ಗೆ ಹೇಗೆ ನಂ.1 ಪಟ್ಟ?

ಪುನೀತ್ ಅವರ ಒಂದೇ ಒಂದು ಚಿತ್ರ 'ರಾಜ್' ಈ ವರ್ಷ ತೆರೆ ಕಂಡಿದೆ. ಅದು ಓಡಿದ್ದು ಅಷ್ಟಕ್ಕಷ್ಟೆ. ಆದರೂ ಮಹತಿಯವರು ಪುನೀತ್‌ಗೆ ನಂ.1 ಪಟ್ಟ ಕಟ್ಟಿದ್ದಾರೆ! ಕಳೆದ ವರ್ಷ ತೆಗೆದುಕೊಳ್ಳುತ್ತಿದ್ದ ಸಂಭಾವನೆ ಮುಂದುವರಿಸಿದ ಆಧಾರದ ಮೇಲೆ ಈ ರೀತಿ ಪಟ್ಟ ಕಟ್ಟಬಹುದೆ? ಈ ವರ್ಷದಲ್ಲಿ 'ಹೀರೋ'ಗಳೆಲ್ಲಾ ತೋಪು. ಆದರೂ ಅಷ್ಟೋ ಇಷ್ಟೋ 2-3 ಚಿತ್ರಗಳಲ್ಲಿ ಯಶಸ್ಸು ಗಳಿಸಿರುವ ದಿಗಂತ್ ಅಥವಾ ಮತ್ತಾರಿಗಾದರೂ ಸಿಗದ ಈ ಪಟ್ಟ ಪುನೀತ್‌ಗೇಕೆ?

-ಕೆ.ಎನ್.ಸಂಪತ್ ಅಯ್ಯಂಗಾರ್, ಬೆಂಗಳೂರು

## ಹುತ್ತರಿ ಸಂಸ್ಕೃತಿ

ಮೂಲ ಸ್ವರೂಪವನ್ನು ಉಳಿಸಿಕೊಂಡು ಹುತ್ತರಿಯನ್ನು ಆಚರಿಸುವ ಕೊಡಗಿನ ಜನತೆ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುತ್ತಿದೆ.

-ನರೇಂದ್ರ ಸಿರಕಜೆ, ಮೈಸೂರು/ ಕೆ.ಎಸ್. ರಘುನಾಥರಾವ್, ಫಲ್ಗುಣಿ/ ತರಂಗಿಣಿ, ತುಮಕೂರು

## ಛೆಬ್ಬಿಯವರ ಸಮಂಜಸ ಉತ್ತರ

ಓದುಗರೊಬ್ಬರು 'ಸುಖೀಭವ'ದ ಬಗ್ಗೆ ಆರೋಗ್ಯಪೂರ್ಣ ಚರ್ಚೆ ಯಾಗಲಿ ಎಂದಿದ್ದಾರೆ. (ಸಮುದ್ರಮಥನ, ನ. 26) ಈ ವಿಭಾಗದಲ್ಲಿ ಕೇಳುಗರ ಪ್ರಶ್ನೆಗಳಿಗೆ ತಕ್ಕಂತೆ ಡಾ. ವಿನೋದ ಛೆಬ್ಬಿ ಸಮಂಜಸ ಉತ್ತರ ನೀಡುತ್ತಿದ್ದಾರೆ. ಪ್ರಶ್ನೆ ಕಳಿಸುವವರು ಕಾಲ್ಪನಿಕವಾಗಿಯೋ ಅಥವಾ ಅತಿರೇಕದ ಅಶ್ಲೀಲ ಪ್ರಶ್ನೆಗಳನ್ನೋ ಸೃಷ್ಟಿಸಿ ಬೇಕುಬೇಕಂತಲೇ ಕಳುಹಿಸಿರಬಹುದು ಅಷ್ಟೆ! ಇಂತಹವುಗಳಿಗೂ ಡಾ. ಛೆಬ್ಬಿಯವರು ಸಮಂಜಸ ಉತ್ತರ ನೀಡುತ್ತಲೇ ಬಂದಿದ್ದಾರೆ. ಉತ್ತರ ನೀಡುವಾಗ ಅತಿರೇಕಕ್ಕೆ ಹೋಗುವುದಾಗಲಿ, ಭ್ರಮೆ ಸೃಷ್ಟಿಸುವುದಾಗಲಿ ನೆಪಮಾತ್ರಕ್ಕೂ ಎಲ್ಲೂ ಕಂಡುಬರುವುದೇ ಇಲ್ಲ.

-ಶಂಕರೇಗೌಡ ತುಂಬಕೆರೆ, ಮಂಡ್ಯ

## ಕಾದಂಬರಿ ಮೂಲಕ ಚರಿತ್ರೆಯ ಪಾಠ!

ಕಪಿಲಿಪಿಸಾರ, ಕರಿಸಿರಿಯಾನಗಳಂತೆ ಕೆ.ಎನ್.ಗಣೇಶಯ್ಯ ಅವರ 'ಚಿತಾದಂತ' ಕೂಡ ಸೊಗಸಾಗಿ ಮೂಡಿಬಂತು. ಮನರಂಜನೆಯ ಜತೆಗೆ ಚರಿತ್ರೆಯ ಪಾಠವೂ ಆಗಿತ್ತು. ಬಿನ್ ಲಾಡೆನ್ ಸೇರ್ಪಡೆ ಆಭಾಸವಾಯಿತು.

ನಾಗಶೈಲಕುಮಾರ್, ಸಿಡ್ನಿ(ಆಸ್ಟ್ರೇಲಿಯಾ)/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

## ತೇರವಾದಿಗಳು ಇರಬಹುದೆ?

ಆಧುನಿಕ ಸಂವೇದನೆಯೊಂದಿಗೆ ಐತಿಹಾಸಿಕ ಸಂಗತಿಗಳನ್ನು ಕಥೆಯ ರೂಪದಲ್ಲಿ ಕೊಟ್ಟಿರುವ ಗಣೇಶಯ್ಯನವರ ಚಿತಾದಂತ ಆಸಕ್ತಿಕರ. ಕಾದಂಬರಿ ಓದಿದಾಗ ತೇರವಾದಿಗಳು ಇನ್ನೂ ಇದ್ದಿರಬಹುದೆ? ಎನಿಸಿತು.

ರಾಜಶೇಖರ ಗೌಡ, ಕೊಟ್ಟೂರು

## ಸಂಚಯ ಕಾವ್ಯ, ಲೇಖನ ಸ್ಪರ್ಧೆ

ಸಂಚಯ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಪತ್ರಿಕೆಯು ಕಾವ್ಯ ಹಾಗೂ ಲೇಖನ ಸ್ಪರ್ಧೆ ಏರ್ಪಡಿಸಿದೆ. ಕಾವ್ಯ ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಇತ್ತೀಚಿನ ಸ್ವಂತ ರಚನೆಯ ಎರಡು ಪದ್ಯ ಕಳಿಸಿಕೊಡಬಹುದು. ಈಗಾಗಲೇ ಪ್ರಕಟವಾಗಿರುವ ಕವಿತೆ ಹಾಗೂ ಅನುವಾದಕ್ಕೆ ಅವಕಾಶ ಇಲ್ಲ.

ಭಾಗವಹಿಸಲಿಚ್ಛಿಸುವವರು ಸಂಚಯ, ಜೆನ್ ಹೈಜಿನಿಕ್ಸ್, ನಂ.86, 8ನೇ ಅಡ್ಡರಸ್ತೆ, ಅಶೋಕ ನಗರ, ಬನಶಂಕರಿ 1ನೇ ಹಂತ, ಬೆಂಗಳೂರು-50 ಇಲ್ಲಿಗೆ ಕಳಿಸಬೇಕು. ಹೆಚ್ಚಿನ ಮಾಹಿತಿಗೆ 080-26614510 ಅಥವಾ 9844063514 ಸಂಪರ್ಕಿಸಬಹುದು.

